ಹೇಳುವುದಿದೆ. ಇದು ಅಪ್ಪ ಮತ್ತು ಊರಿನಿಂದ ಬಂದ ಶಿಕ್ಷಕ ಪರಂಪರೆಯ ಪ್ರೇಮ. ನಿರ್ದೇಶಕನಾಗಿದ್ದಾಗ ಅಜ್ಞಾತ ಪ್ರೇಕ್ಷಕರ ಜೊತೆ ಸಂವಾದ ಸಾಧ್ಯವಾಗಬಹುದು. ಆದರೆ, ತರಗತಿಗಳಲ್ಲಿ ವಿದ್ಯಾರ್ಥಿಗಳೊಂದಿಗೆ ನೇರ ಸಂವಾದ ಸಾಧ್ಯವಾಗುತ್ತದೆ. ವರ್ಷದ ಕೊನೆಗೆ ನಾನು ರೂಪಿಸಿದ ವಿದ್ಯಾರ್ಥಿಗಳ ಯಶಸ್ಸು ಸ್ಪಷ್ಟವಾಗಿ ಕಾಣಿಸುತ್ತದೆ. ಆದರೆ, ಸಿನಿಮಾದ ಬಗ್ಗೆ, ಓದುಗರ ಬಗ್ಗೆ ಈ ಮಾತನ್ನು ಹೇಳಲು ಸಾಧ್ಯವಿಲ್ಲ.

ಬೋಧನೆಯ ಬಗೆಗಿನ ಪ್ರೀತಿಯಿಂದಲೇ ನನ್ನ ಕೊನೆಯ ಸಾಹಸ ಎನ್ನುವಂತೆ 'ಟೆಂಟ್ ಸಿನಿಮಾ ಶಾಲೆ' ನಡೆಸುತ್ತಿದ್ದೇನೆ. ಇಲ್ಲಿ ಬರುವ ವಿದ್ಯಾರ್ಥಿಗಳೊಂದಿಗಿನ ಸಂವಹನ ಅಪಾರ ಖುಷಿ ಕೊಡುತ್ತದೆ. ಉಪನ್ಯಾಸಕನಾದ ಬಗ್ಗೆ ನನಗೆ ಸ್ವಲ್ಪವೂ ವಿಷಾದವಿಲ್ಲ. ಸಿನಿಮಾ ತರಗತಿಗಳಲ್ಲಿ 'ರಾಮಾಯಣ ದರ್ಶನಂ' ಓದುವ ಅನುಭವವೇ ಬೇರೆ.

- **ಅನೇಕ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವುದರಿಂದ ಪ್ರತಿಭೆ ಚೆಲ್ಲಾಪಿಲ್ಲಿ ಆಗಿದೆ ಎಂದು ನಿಮಗನ್ನಿಸಿದೆಯೇ?**

ನಾನು ಮೈಲಿಗಲ್ಲುಗಳನ್ನು ಬರೆಯುವ ಕೆಲಸವನ್ನು ಮಾಡಿರುವೆ. ಒಂದು ಅಕ್ಷರಕ್ಕೆ 25 ಪೈಸೆ ದೊರೆಯುತ್ತಿತ್ತು. 'ಮಂಡ್ಯ' ಎಂದು ಬರೆದರೆ 50 ಪೈಸೆ. ಹಾಗಾಗಿ ಮಂಡ್ಯಕ್ಕಿಂತಲೂ ಪಿರಿಯಾಪಟ್ಟಣ, ಚಿಕ್ಕನಾಯಕನಹಳ್ಳಿ ಹೆಚ್ಚು ಇಷ್ಟವಾಗುತ್ತಿದ್ದವು. ಸೈಕಲ್‌ನಲ್ಲಿ ಹೋಗಿ ಬರೆಯುವುದು ಖುಷಿ ಕೊಡುತ್ತಿತ್ತು. ಚಿತ್ರಮಂದಿರಗಳಲ್ಲೂ ಕೆಲಸ ಮಾಡಿರುವೆ. ಗೇಟ್‌ಕೀಪರ್, ಟಿಕೆಟ್ ಕೊಡುವುದು, ಪ್ರೊಜೆಕ್ಷನ್ – ಎಲ್ಲವನ್ನೂ ಮಾಡಿರುವೆ. ಹೀಗೆಯೇ ಓದು, ಬರಹ, ಉಪನ್ಯಾಸ, ಸಿನಿಮಾ ಮಾಡಿರುವೆ. ಈ ಪಯಣದಲ್ಲಿ ನನ್ನ ಪ್ರತಿಭೆ ಚೆಲ್ಲಾಪಿಲ್ಲಿ ಆಗಿದೆಯೇ ಎಂದು ಹಿಂತಿರುಗಿ ನೋಡಿದ್ದಿದೆ. ಇದು ಬದುಕನ್ನು ಅಲ್ಲಾಡಿಸುವ, ಬಹಳ ಸಲ ನನ್ನನ್ನು ನಾನು ಕೇಳಿಕೊಂಡಿರುವ ಪ್ರಶ್ನೆ. ಇವತ್ತಿನವರೆಗೆ 'ಕರ್ನಾಟಕ ಸಾಹಿತ್ಯ ಅಕಾಡೆಮಿ'ಯ ಒಂದು ಪ್ರಶಸ್ತಿಯೂ ನನಗೆ ಬಂದಿಲ್ಲ. ನನ್ನ ಜೊತೆ ಬರೆಯುತ್ತಿದ್ದ ಲೇಖಕರು 2–3 ಪ್ರಶಸ್ತಿ ಪಡೆದಿದ್ದಾರೆ. ಇದಕ್ಕೆ ಕಾರಣ, ನನ್ನನ್ನು ಸಿನಿಮಾದವನು ಎಂದು ಸಾಹಿತ್ಯವಲಯ ದೂರ ಇಟ್ಟಿರುವುದು. ಚಿತ್ರರಂಗದಲ್ಲಿ ಕೂಡ ಮುಖ್ಯವಾಹಿನಿಯವರು ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ಅವರ ಪಾಲಿಗೆ ನಾನು ಲೇಖಕ. ಇನ್ನು ಅಕಡೆಮಿಕ್ ವಲಯ(ವಿಶ್ವವಿದ್ಯಾಲಯ)ದವರು ಸಿನಿಮಾ ಕುರಿತ ಚರ್ಚೆಗಳಿಗಷ್ಟೇ ನನ್ನನ್ನು ನೆನಪಿಸಿಕೊಳ್ಳುತ್ತಾರೆ. ಎಲ್ಲೂ ಸಲ್ಲದ ಅನಾಥಪ್ರಜ್ಞೆಯೊಂದು ಕಾಡುವುದಿದೆ.

ಸಾವು ನನ್ನನ್ನು ಸದಾ ಕಾಡುತ್ತಿರುತ್ತದೆ. ಆ ಭಯದಿಂದಲೇ ಸದಾ ಕೆಲಸವನ್ನು ಮಾಡಬೇಕನ್ನಿಸುತ್ತದೆ – ಅದು ಯಾವ ಕೆಲಸವಾದರೂ ಸರಿ. ನಿದ್ದೆಯೂ ಕಡಿಮೆ. ನಾನು ಲೇಖಕನಾ, ಅಲೆಮಾರಿಯಾ, ನಿರ್ದೇಶಕನಾ, ಮೇಷ್ಟ್ರಾ – ಪ್ರತಿ ಕ್ಷೇತ್ರದಲ್ಲೂ ಮಿತಿ ಇರುತ್ತದೆ. ನಾನು ಒಂದರಿಂದ ಇನ್ನೊಂದಕ್ಕೆ ಜಿಗಿಯುತ್ತಿರುತ್ತೇನೆ. ಎಲ್ಲ ಕ್ಷೇತ್ರಗಳಲ್ಲೂ ನನ್ನ ಮಿತಿಗೆ ಸಾಧ್ಯವಿರುವಷ್ಟು ಕೆಲಸ ಮಾಡಿರುವೆ ಎನ್ನುವ ನೆಮ್ಮದಿಯಂತೂ ಇದೆ. ಮಾಡಬೇಕಾದ ಕೆಲಸಗಳೂ ಸಾಕಷ್ಟಿವೆ. ನನ್ನೂರನ್ನು ಪೂರ್ಣ ಸೋಲಾರ್ ಮಾಡುವ ಆಸೆ ಇದೆ. ಬ್ಯಾಂಕಿಂಗ್ ವ್ಯವಸ್ಥೆಗೆ ಊರನ್ನು ಒಳಪಡಿಸುವ ಆಸೆ ಇದೆ. ಮಾಡಬೇಕಾದ ಸಿನಿಮಾಗಳು, ಬರೆಯಬೇಕಾದ ಕೃತಿಗಳು ಸಾಕಷ್ಟಿವೆ.

✿